ಗ್ರಾಹಕರಿಗೆ ರಕ್ಷಣೆ ನೀಡುವುದೇ;

ಇ) ಅಕ್ರಮವಾಗಿ ಗ್ಯಾಸ್ ಪಡೆದವರಿಗೆ ಕಾನೂನು ತಿಳಿವಳಿಕೆ ಮೂಲಕ ಸಕ್ರಮಗೊಳಿಸಲು ಸರ್ಕಾರ ಯಾವ ಕ್ರಮಕೈಗೊಳ್ಳುವುದು?

ಶೋಭಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು):–

ಅ) ಅವಿಭಾಜಿತ ಕುಟುಂಬಗಳಲ್ಲಿ ಹೊಂದಿರುವ ಎರಡಕ್ಕಿಂತ ಹೆಚ್ಚಿನ ಗ್ಯಾಸ್ ಕಲೆಕ್ಷನ್ ಬಗ್ಗೆ ಸರ್ಕಾರವು ಯಾವುದೇ ದ್ವಂದ್ವ ನಿಲುವು ತಳೆದಿರುವುದಿಲ್ಲವಾದ್ದರಿಂದ ಅಂತಹ ಕುಟುಂಬಗಳು ದುಗುಡಕ್ಕೆ ಒಳಗಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಈ ಬಗ್ಗೆ Liquified Petroleum Gas (Regulation of Supply and Distribution) Order 2000 ನ್ನು ಕೇಂದ್ರ ಸರ್ಕಾರವು ಮಾಡಿರುತ್ತದೆ. ಈ ಬಗ್ಗೆ ನಿಯಮಗಳನ್ನು ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ.

ಇ) ಒಂದಕ್ಕಿಂತ ಹೆಚ್ಚು ಎಲ್‌ಪಿಜಿ ಸಂಪರ್ಕ ಪಡೆದವರ ವಿರುದ್ಧ ರಾಜ್ಯ ಸರ್ಕಾರವು ಈವರೆವಿಗೆ ಯಾವುದೇ ಕ್ರಮ ತೆಗೆದುಕೊಳ್ಳದೆ ಇರುವುದರಿಂದ ಸಕ್ರಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದು ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಎಲ್‌ಪಿಜಿ ಸಂಪರ್ಕ ನೀಡುವ ಬಗ್ಗೆ ಕೇಂದ್ರ ಸರ್ಕಾರವು ನಿಯಮದಲ್ಲಿ ಅನುವು ಮಾಡಬೇಕಾಗುತ್ತದೆ.

ಬಿ.ಪಿ.ಎಲ್. ಕಾರ್ಡ್ ವಿತರಣೆ

182 (80) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :– ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸರ್ಕಾರ ಬಡ ಜನರಿಗೆ ಬಿ.ಪಿ.ಎಲ್ ಕಾರ್ಡ್ ವಿತರಣೆ ಮಾಡಲು ಉದ್ದೇಶಿಸಿದೆಯೇ

ಆ) ಹಾಗಿದ್ದಲ್ಲಿ, ಬಿಪಿಎಲ್ ಕಾರ್ಡ್‌ಗಳನ್ನು ಯಾವಾಗ ವಿತರಿಸಲಾಗುವುದು?

ಶೋಭಾ ಕರಂದ್ಲಾಜೆ :– (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು):–

ಅ) ಹೌದು.

ಆ) ದಿನಾಂಕ: 18.11.2011 ರಿಂದ ಪಡಿತರ ಚೀಟಿಗಾಗಿ "ಆನ್‌ಲೈನ್" ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ನಗರ/ಪಟ್ಟಣ ಪ್ರದೇಶದಲ್ಲಿ ಅರ್ಜಿಗಳನ್ನು ಇಲಾಖೆಯ ವೆಬ್ ಸೈಟ್ ಮೂಲಕ ಅಥವಾ ತಾಲ್ಲೂಕು ಕಛೇರಿಗಳಿಗೆ ಮತ್ತು ಉಪ ನಿರ್ದೇಶಕರು ಕಛೇರಿಗೆ ಹೋಗಿ ಆನ್‌ಲೈನ್ ಆಗಿ ಸಲ್ಲಿಸಬಹುದಾಗಿದೆ. ಗ್ರಾಮಾಂತರ ಪ್ರದೇಶದ ಜನರು ಸಂಬಂಧಿಸಿದ ಗ್ರಾಮ ಪಂಚಾಯಿತಿ ಕಛೇರಿಗೆ ಹೋಗಿ ಕಂಪ್ಯೂಟರ್‌ನ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ನಿಯಮಾನುಸಾರ ಸ್ಥಳ ತನಿಖೆ ಮಾಡಿ ಅರ್ಹತೆ ಆಧಾರದ ಮೇಲೆ ಪಡಿತರ ಚೀಟಿಗಳನ್ನು ಆದಷ್ಟು ಬೇಗನೆ ನೀಡಲಾಗುವುದು.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ರಿಸೀವಿಂಗ್ ಸ್ಟೇಷನ್‌ಗಳನ್ನು ಕುರಿತು

183 (81) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :– ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಪೂರ್ಣ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಮ್ಮರಡಿ ಮತ್ತು ಕೊಣಂದೂರು ಸಬ್ ಸ್ಟೇಷನ್ ಯಾವಾಗ ಕಾರ್ಯ ನಿರ್ವಹಿಸುತ್ತವೆ, ಅವುಗಳು ಕಾರ್ಯಾರಂಭಗೊಳ್ಳಲು ಅಡ್ಡಿ ಆತಂಕಗಳೇನು;

ಆ) ನಗರ, ಸಂಪೆಕಟ್ಟೆ, ರಿಪ್ಪನ್‌ಪೇಟೆ ಮತ್ತು ಮಂಡಗದ್ದೆಯಲ್ಲಿ ಸಬ್ ಸರ್ವಿಸ್ ಸ್ಟೇಷನ್ ಸ್ಥಾಪಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು;

ಇ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಲೈನ್‌ಮನ್‌ಗಳ ಟಿ.ಸಿ.ಗಳ ವಿದ್ಯುತ್ ಕಂಬಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿವೆಯೆ;

ಈ) ಮೇಲ್ಕಂಡ ಕೊರತೆ ನೀಗಲು ಸರ್ಕಾರಕ್ಕೆ ಹಣದ ಕೊರತೆಯೇ ಅಥವಾ ಸರ್ಕಾರಕ್ಕೆ ಮಾಹಿತಿ ಇಲ್ಲವೆ?